ವಿಸ್ತರಣಾ ಅಧಿಕಾರಿಗಳ ಹುದ್ದೆಯನ್ನೂ ಸಹ ಭರ್ತಿ ಮಾಡಿದ್ದೇವೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿಗಳು.

252(1693)

ಶ್ರೀ.ಡಿ.ಆರ್. ಪಾಟೀಲ್(ಗದಗ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದ ಕೊಳವೆಬಾವಿಗಳ ಸಂಖ್ಯೆ ಎಷ್ಟು, ವರ್ಷವಾರು ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡಿರಿ.

ಆ) ಎಷ್ಟು ಕೊಳವೆಬಾವಿಗಳಿಂದ ನೀರೆತ್ತಲಾಗುತ್ತಿದೆ, ಎಷ್ಟು ಕೊಳವೆಬಾವಿಗಳಿಂದ ನೀರೆತ್ತಲಾಗುತ್ತಿಲ್ಲ, ವರ್ಷವಾರು ವಿಧಾನ ಸಭಾ ಕ್ಷೇತ್ರವಾರು ವಿವರ ನೀಡಿರಿ.

ಇ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಈ ವರೆಗೆ ಎಷ್ಟು ಭೂಮಿಯನ್ನು ನೀರಾವರಿಗೊಳಿಸಲಾಗಿದೆ.

ಈ) ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳಿಗೆಲ್ಲಾ ನೀರೆತ್ತಲು ವ್ಯವಸ್ಥೆ ಮಾಡಿದರೆ ಎಷ್ಟು ಭೂಮಿಗೆ ನೀರು ಒದಗಿಸಬಹುದಾಗಿದೆ.

ಉ) ಕೊರೆದ ಕೊಳವೆಬಾವಿಗಳಿಂದ ನೀರೆತ್ತಲು ಸೌಲಭ್ಯಗಳನ್ನು ನೀಡದಿರುವುದರಿಂದ ರೈತರಿಗೆ ಆಗಿರಬಹುದಾದ ಅಂದಾಜು ಹಾನಿ ಎಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿ ಒಟ್ಟು ಯಶಸ್ವಿ 9646 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

1995 - 96	714
1996 - 97	4289
1997 - 98	4643

ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಒಟ್ಟು ಯಶಸ್ವಿ ಕೊಳವೆಬಾವಿಗಳ ಪೈಕಿ 5598 ಕೊಳವೆಬಾವಿಗಳು ವಿದ್ಯುದ್ದೀಕರಣಗೊಂಡಿವೆ. ವಿದ್ಯುದ್ದೀಕರಣಗೊಂಡ 5598 ಕೊಳವೆಬಾವಿಗಳ ಪೈಕಿ 75 ಕೊಳವೆಬಾವಿಗಳು ದುರಸ್ತಿಗೆ ಒಳಪಟ್ಟಿದ್ದು ನೀರನ್ನು ಎತ್ತುತ್ತಿಲ್ಲ. ತಾಲ್ಲೂಕುವಾರು ಮಾಹಿತಿಯನ್ನು ಲಗತ್ತಿಸಿದೆ.

ಇ) ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುದ್ದೀಕರಣವಾದ ಬಾವಿಗಳು ಹಾಗೂ ಏತ ನೀರಾವರಿಯಿಂದ 30,175-30ಎಕರೆ ಜಮೀನು ನೀರಾವರಿ ಮಾಡಲಾಗಿದೆ.

ಈ) ಮೇಲೆ ತಿಳಿಸಿದ 30,175-30 ಎಕರೆ ಜಮೀನು ಸೇರಿ ಒಟ್ಟು 56095.02ಎಕರೆ ಜಮೀನು ನೀರಾವರಿಯಾಗುತ್ತದೆ. (ಏತನೀರಾವರಿ ಘಟಕಗಳೂ ಸೇರಿ).

ಉ) ಈ ಯೋಜನೆಯನ್ನು ಶೇಖಡ 100ರ ಸಹಾಯಧನದ ರೂಪದಲ್ಲಿ ಅನುಷ್ಠಾನ ಗೊಳಿಸುತ್ತಿರುವುದರಿಂದ ಫಲಾನುಭವಿಗಳಿಗೆ ಯಾವುದೇ ಹಾನಿ ಆಗಿರುವುದಿಲ್ಲ.

ಅನುಬಂಧ-1

ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ ಕೊಳವೆ ಬಾವಿಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುದ್ದೀಕರಣವಾದ ಸಂಖ್ಯೆ	ವಿದ್ಯುದ್ದೀಕರಣಕ್ಕೆ ಬಾಕಿ
1.	ಬೆಂಗಳೂರು ಉತ್ತರ	14	10	04
2.	ಬೆಂಗಳೂರು ದಕ್ಷಿಣ	84	12	72
3.	ಆನೇಕಲ್	27	05	22
	ಒಟ್ಟು	125	27	98
	2. ಬೆಂಗಳೂರು ಗ್ರಾಮಾಂತರ:			
1.	ದೊಡ್ಡಬಳ್ಳಾಪುರ	47	42	05
2.	ದೇವನಹಳ್ಳಿ	16	15	10
3.	ಹೊಸಕೋಟೆ	30	30	-
4.	ಮಾಗಡಿ	54	49	05
5.	ಕನಕಪುರ	57	53	04
6.	ನೆಲಮಂಗಲ	28	27	01
7.	ಚೆನ್ನಪಟ್ಟಣ	32	27	05
8.	ರಾಮನಗರ	44	40	04
	ಒಟ್ಟು	308	283	25
	3. ಕೋಲಾರ ಜಿಲ್ಲೆ:			
1.	ಕೋಲಾರ	195	123	72
2.	ಮಾಲೂರು	50	25	25
3.	ಬಂಗಾರಪೇಟೆ	54	14	30
4.	ಶ್ರೀನಿವಾಸಪುರ	66	26	40
5.	ಮುಳಬಾಗಿಲು	74	42	32
6.	ಗುಡಿಬಂಡೆ	26	24	02
7.	ಗೌರಿಬಿದನೂರು	75	19	56
8.	ಚಿಂತಾಮಣಿ	115	56	59
9.	ಬಾಗೇಪಲ್ಲಿ	29	21	08
10.	ಶಿಡ್ಲಘಟ್ಟ	19	-	19
	ಒಟ್ಟು	703	360	343

1	2	3	4	5
	4. ಚಿತ್ರದುರ್ಗಾ ಜಿಲ್ಲೆ:			
1.	ಹಿರಿಯೂರು	316	193	123
2.	ಚಿತ್ರದುರ್ಗ	25	14	11
3.	ಚಳ್ಳಕೆರೆ	52	51	01
4.	ಮೊಳಕಾಲ್ಮೂರು	28	08	15
5.	ಹೊಳಲಕೆರೆ	122	56	66
6.	ಹೊಸದುರ್ಗ	32	16	16
7.	ದಾವಣಗೆರೆ	23	22	01
8.	ಜಗಳೂರು	57	42	15
9.	ಹರಿಹರ	21	16	05
	ಒಟ್ಟು	671	418	253
	5. ಶಿವಮೊಗ್ಗ:			
1.	ಶಿವಮೊಗ್ಗ	42	29	13
2.	ಭದ್ರಾವತಿ	07	05	02
3.	ಚೆನ್ನಗಿರಿ	154	108	46
4.	ಹೊನ್ನಾಳಿ	30	29	01
5.	ಶಿಕಾರಿಪುರ	235	162	73
6.	ಸೊರಬ	59	29	30
	ಒಟ್ಟು	527	362	165
	6. ತುಮಕೂರು ಜಿಲ್ಲೆ:			
1.	ತುಮಕೂರು	52	35	16
2.	ಗುಬ್ಬಿ	41	16	25
3.	ಮಧುಗಿರಿ	72	46	26
4.	ಕೊರಟಗೆರೆ	84	63	21
5.	ಚಿಕ್ಕನಾಯಕನಹಳ್ಳಿ	71	27	44
6.	ಶಿರಾ	57	34	23
7.	ಪಾವಗಡ	110	51	59
8.	ಕುಣಿಗಲ್	47	01	46
9.	ತಿಪಟೂರು	23	02	21
10.	ತುರುವೆಕೆರೆ	36	24	12
	ಒಟ್ಟು	593	300	293

01	02	03	04	05
	7. ಧಾರವಾಡ ಜಿಲ್ಲೆ :			
1.	ಕುಂದಗೋಳ	56	23	33
2.	ಧಾರವಾಡ	48	34	14
3.	ಕಲಘಟಗಿ	04	04	-
4.	ಗದಗ	29	22	07
5.	ರೋಣ	124	97	27
6.	ಮುಂಡರಗಿ	28	18	10
7.	ಶಿರಹಟ್ಟಿ	24	20	04
8.	ಹಾವೇರಿ	109	42	67
9.	ರಾಣಿಬೆನ್ನೂರು	135	115	20
10.	ಹಿರೇಕೆರೂರು	77	59	18
11.	ಸವಣೂರು	182	27	155
12.	ಬ್ಯಾಡಗಿ	50	35	15
13.	ಶಿಗ್ಗಾಂವ	07	02	05
14.	ಹಾನಗಲ್ಲು	04	02	02
	ಒಟ್ಟು	877	500	377
	8. ಉತ್ತರ ಕನ್ನಡ ಜಿಲ್ಲೆ :			
1.	ಮುಂಡಗೋಡು	80	51	29
2.	ಹಳಿಯಾಳ	30	30	-
3.	ಶಿರಸಿ	15	14	01
4.	ಯಲ್ಲಾಪುರ	09	09	-
5.	ಅಂಕೋಲ	04	-	04
	ಒಟ್ಟು	138	104	34
	9. ಬೆಳಗಾಂ ಜಿಲ್ಲೆ :			
1.	ಬೈಲಹೊಂಗಲ	17	17	-
2.	ಖಾನಾಪುರ	17	17	-
3.	ಚಿಕ್ಕೋಡಿ	50	44	06
4.	ಅಥಣಿ	153	112	41
5.	ಗೋಕಾಕ್	27	27	-
6.	ಸೌಂದತ್ತಿ	105	100	03
7.	ರಾಯಬಾಗ್	460	293	167
	ರಾಮದುರ್ಗ	06	06	-
	ಒಟ್ಟು	833	616	217

01	02	03	04	05
	10. ಗುಲ್ಬರ್ಗ ಜಿಲ್ಲೆ :			
1.	ಗುಲ್ಬರ್ಗ	52	35	17
2.	ಅಳಂದ	19	06	13
3.	ಅಫಜಲಪೂರ	165	111	54
4.	ಚೇವರ್ಗಿ	14	12	07
5.	ಯಾದಗಿರಿ	235	58	177
6.	ಶಹಾಪುರ	31	-	31
7.	ಚಿತ್ತಾಪೂರ	53	19	34
8.	ಸೇಡಂ	06	-	06
9.	ಚಿಂಚೋಳಿ	22	19	03
	ಒಟ್ಟು	597	260	337
	11. ಬಳ್ಳಾರಿ ಜಿಲ್ಲೆ :			
1.	ಹಡಗಲಿ	118	87	31
2.	ಹರಪನಹಳ್ಳಿ	113	90	23
3.	ಹಗರಿಬೊಮ್ಮನಹಳ್ಳಿ	77	51	26
4.	ಹೋಸಪೇಟೆ	06	06	-
5.	ಕೂಡ್ಲಗಿ	47	29	18
	ಒಟ್ಟು	361	263	98
	12. ಬೀದರ್ ಜಿಲ್ಲೆ :			
1.	ಬೀದರ್	34	21	13
2.	ಬಾಲ್ಕಿ	12	02	10
3.	ಔರಾದ್	18	11	07
4.	ಹುಮ್ನಾಬಾದ್	73	32	41
5.	ಬಸವಕಲ್ಯಾಣ	60	24	36
	ಒಟ್ಟು	197	90	107
	13. ರಾಯಚೂರು ಜಿಲ್ಲೆ :			
1.	ರಾಯಚೂರು	04	04	
2.	ದೇವದುರ್ಗ	26	02	24
3.	ಕುಷ್ಟಗಿ	132	100	32
4.	ಕೊಪ್ಪಳ	78	25	53

5.	ಗಂಗಾವತಿ	79	31	48
6.	ಯಲ್ಬುರ್ಗಾ	98	32	66
7.	ಮಾನವಿ	25	-	25
	ಒಟ್ಟು	442	194	248
	14. ಬಿಜಾಪುರ ಜಿಲ್ಲೆ :			
1.	ಬಿಜಾಪುರ	525	301	224
2.	ಬಸವನಬಾಗೇವಾಡಿ	194	157	37
3.	ಮುದ್ದೇಬಿಹಾಳ	54	10	44
4.	ಇಂಡಿ	233	187	46
5.	ಸಿಂದಗಿ	85	04	81
6.	ಜಮಖಂಡಿ	77	73	04
7.	ಮುದೋಳ	110	102	08
	ಒಟ್ಟು	1278	834	444
	15. ದಕ್ಷಿಣ ಕನ್ನಡ ಜಿಲ್ಲೆ :			
1.	ಸೂಳ್ಯ	02	-	02
2.	ಪುತ್ತೂರು	04	-	04
3.	ಮಂಗಳೂರು	04	-	04
4.	ಕಾರ್ಕಳ	04	-	04
	ಒಟ್ಟು	14	-	14
	16. ಕೊಡಗು:			
1.	ಸೋಮವಾರಪೇಟ್	49	-	49
	ಒಟ್ಟು	49	-	49
	17. ಮೈಸೂರು ಜಿಲ್ಲೆ:			
1.	ಮೈಸೂರು	59	59	-
2.	ಟಿ. ನರಸೀಪುರ	52	06	46
3.	ಹುಣಸೂರು	101	46	55
4.	ಪಿರಿಯಾಪಟ್ಟಣ	36	33	03
5.	ನಂಜನಗೂಡು	25	17	08
6.	ಹೆಚ್.ಡಿ. ಕೋಟೆ	33	31	02
7.	ಚಾಮರಾಜನಗರ	195	78	117
8.	ಗುಂಡ್ಲುಪೇಟ್	98	93	05

9.	ಕೊಳ್ಳೇಗಾಲ	13	02	11
	ಒಟ್ಟು	612	365	247
	18. ಚಿಕ್ಕಮಗಳೂರು ಜಿಲ್ಲೆ:			
1.	ಕಡೂರು	347	134	213
2.	ತರಿಕೆರೆ	135	45	90
3.	ಚಿಕ್ಕಮಗಳೂರು	34	14	20
4.	ಎಸ್.ಆರ್.ಪುರ	06	01	05
	ಒಟ್ಟು	522	194	328
	19. ಹಾಸನ ಜಿಲ್ಲೆ:			
1.	ಹಾಸನ ತಾ:	42	28	14
2.	ಅರಕಲಗೂಡು	02	-	02
3.	ಬೇಲೂರು	112	74	38
4.	ಆಲೂರು	01	-	01
5.	ಸಕಲೇಶಪುರ	03	-	03
6.	ಚೆನ್ನರಾಯಪಟ್ಟಣ	184	95	89
7.	ಹೊಳೆನರಸೀಪುರ	06	-	06
8.	ಅರಸೀಕೆರೆ	83	17	66
	ಒಟ್ಟು	433	214	219
	20. ಮಂಡ್ಯ ಜಿಲ್ಲೆ:			
1.	ಮಳವಳ್ಳಿ	156	94	62
2.	ಮದ್ದೂರು	25	21	04
3.	ಶ್ರೀರಂಗಪಟ್ಟಣ	14	06	08
4.	ಕೆ.ಆರ್.ಪೇಟ್	109	34	75
5.	ನಾಗಮಂಗಲ	02	02	-
6.	ಪಾಂಡವಪುರ	02	02	-
7.	ಮಂಡ್ಯ	58	55	03
	ಒಟ್ಟು	366	214	152

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯಮಂತ್ರಿಗಳು ತಮ್ಮ ಉತ್ತರದೊಳಗೆ, ನಾಲ್ಕು ಸಾವಿರಕ್ಕೂ ಹೆಚ್ಚು ಕೊಳವೆಬಾವಿಗಳಿಗೆ ಇನ್ನೂ ನೀರೆತ್ತುವ ವ್ಯವಸ್ಥೆ ಮಾಡಿಲ್ಲವೆಂದು ತಾವು ಹೇಳಿದ್ದೀರಿ. ನಾನು ಮುಂದೆ ಇನ್ನೊಂದು ಪ್ರಶ್ನೆಯನ್ನು ಕೇಳಿದೆ, ಕೊಳವೆಬಾವಿಗಳಿಂದ ನೀರೆತ್ತುವ ಸೌಲಭ್ಯವನ್ನು ನೀಡದಿರುವುದರಿಂದ ರೈತರಿಗೆ ಆಗಿರುವ ಅಂದಾಜು ಹಾನಿಯೆಷ್ಟು? ರೈತರಿಗೆ ಏನೂ ಹಾನಿಯಾಗಿಲ್ಲವೆಂದು ತಾವು ಉತ್ತರ ಕೊಟ್ಟಿದ್ದೀರಿ. ನೀರನ್ನು ಬಾವಿಯಿಂದ ಎತ್ತಿ ಕೊಟ್ಟಿದ್ದರೆ ಎರಡೂವರೆ ವರ್ಷಗಳಿಂದ ಒಂದು ಐದು ಪೀಕ್ ಬರುತ್ತಿದ್ದವು. ರೈತರಿಗೆ ಏನೂ ಹಾನಿಯಾಗಿಲ್ಲವೆಂದರೆ ಹೇಗೆ ? ಸುಮಾರು ರೈತರಿಗೆ ನೂರು ಕೋಟಿ ರೂಪಾಯಿಗೂ ಹೆಚ್ಚು ಹಾನಿಯಾಗಿದೆ. ಅದಕ್ಕಾಗಿ ಆ ನಾಲ್ಕು ಸಾವಿರ ಕೊಳವೆಬಾವಿಗಳಿಗೆ ಎಷ್ಟು ದಿವಸದೊಳಗೆ ನೀವು ಪಂಪ್‌ಸೆಟ್ ಅಳವಡಿಸಿ ನೀರೆತ್ತಲು ವ್ಯವಸ್ಥೆಮಾಡಿ ಕೊಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಹಾನಿಯಾಗಿಲ್ಲ ಎನ್ನತಕ್ಕ ಮಾತು ಏನಿದೆ ಅದಕ್ಕೆ ಉತ್ತರ ಹೇಳುತ್ತೇನೆ. ಇಲ್ಲಿ ನೂರಕ್ಕೆ ನೂರರಷ್ಟು ಮುಫತ್ತಾಗಿ ನಾವು ಕೊಡುತ್ತೇವೆ,. ಇದುವರೆಗೆ ನೀರು ಹಾಯಿಸಿ ಅದು ಕಡಿಮೆಯಾಗಿದ್ದರೆ ಆವಾಗ ಅದು ಹಾನಿಯಾಗುತ್ತಿತ್ತು. ಈಗ ಹೊಸದಾಗಿ ಕೊಳವೆಬಾವಿ ಕೊರೆದು ನೀರೆತ್ತತಕ್ಕ ಕೆಲಸ ಮಾಡುತ್ತೇವೆ. ನಾಲ್ಕು ಸಾವಿರ ಮೋಟಾರುಗಳನ್ನು ಕೊಂಡುಕೊಳ್ಳಲಿಕ್ಕೆ ವಿಧಾನ ಪರಿಷತ್‌ನಲ್ಲಿ ಸದನ ಸಮಿತಿಯನ್ನು ಮಾಡಿ ಅದು ತನ್ನ ರಿಪೋರ್ಟ್ ಕೊಟ್ಟಿದೆ. ಆ ರಿಪೋರ್ಟ್‌ನ ಆಧಾರದ ಮೇಲೆ ಟೆಂಡರ್‌ಗಳನ್ನು ಕರೆದಿದ್ದೇವೆ. ಟೆಂಡರ್‌ಗಳನ್ನು ಕೂಡ ಓಪನ್ ಮಾಡಿದ್ದಾರೆ. ಇನ್ನೊಂದು 15 ದಿವಸಗಳಲ್ಲಿ ಎಲ್ಲಾ ಕಡೆ ಮೋಟಾರುಗಳನ್ನು ಸಪ್ಲೈ ಮಾಡತಕ್ಕ ವ್ಯವಸ್ಥೆಮಾಡುತ್ತೇವೆ. ನಾಲ್ಕು ಸಾವಿರ ಕೊಳವೆಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕ ವ್ಯವಸ್ಥೆಯನ್ನು ಸಹ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ. ಮುಜುನಾಥ್ : (ಅರಣ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 17ನೇಯ ಪಟ್ಟಿಯಲ್ಲಿ 44 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹುಬ್ಬಳ್ಳಿಯ ಕೃಷ್ಣಾಪೂರದಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವು ಗೊಳಿಸುವುದು

1083 (1530) :

ಶ್ರೀ ಅಶೋಕ್ ಕಾಟ್ಟೆ, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಕೃಷ್ಣಾಪೂರ ರಿಸ.ನಂ93ಎ ರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ 1988ರಲ್ಲಿ 76 ಜನ ನಿವೇಶನರಹಿತರಿಗೆ ಪ್ಲಾಟುಗಳನ್ನು ನೀಡಿ ಅವರಿಂದ ಟ್ಯಾಕ್ಸ್ ತುಂಬಿಕೊಂಡು ಹಕ್ಕುಪತ್ರ ನೀಡಿದ್ದರೂ, ಈವರೆಗೂ ಸಂಬಂಧಿಸಿದವರಿಗೆ ಖರೀದಿ ಮಾಡಿ ಕೊಟ್ಟಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರೀ ಪ್ಲಾಟುಗಳಲ್ಲಿ ಬೇರೆಯವರು ಗುಡಿಸಲು ಹಾಕಿ ಅನಧಿಕೃತವಾಗಿ ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?